ಶ್ರೀ ಕರಿಬಸವನಗೌಡ.—ಮಾನ್ಯ ಅಧ್ಯಕ್ಷರೇ, ದುರುಪಯೋಗವಾಗಿರತಕ್ಕ ವಿಷಯ ತಿಳಿದ ಮೇಲೆ ನಾನು ಪ್ರಶ್ನೆ ಕೇಳಿದ್ದೇನೆ. ಈ ಸಂಘದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಲಾಖೆಯವರು ಕಳುಹಿಸಿದ್ದರೆ. ಇದರ ಮೇಲೆ ಮಾನ್ಯ ಸಚಿವರು ಏನು ಕ್ರಮ ತೆಗೆದುಕೊಳ್ಳುತ್ತಾರೆ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಈ ಸಂಘದ ಮೇಲೆ ಮಾನ್ಯ ಸದಸ್ಯರು ಏನು ದೂರು ಸಲ್ಲಿಸಿದ್ದಾರೆ, ಅದರ ವಿಚಾರಣೆಯನ್ನು ರಿಜಿಸ್ಟ್ರಾರ್‌ರವರು ಮಾಡಿಸಿದ್ದಾರೆ. ಸೊಸೈಟಿಯಲ್ಲಿ ಸುಮಾರು ೧೭,೪೭೬ ರೂಪಾಯಿಗಳಷ್ಟು ಹಣ ಓವರ್‌ಡ್ಯೂಸ್ ಆಗಿ ವಸೂಲಾಗದೇ ನಿಂತಿರುವುದು ತಿಳಿದುಬಂದಿದೆ. ಜೊತೆಗೆ ಅಧ್ಯಕ್ಷರು ಮತ್ತು ಬೋರ್ಡ್ ಸದಸ್ಯರು ಒಟ್ಟು ೮ ಜನರಿಂದ ೪೨೦೦ ರೂಪಾಯಿ ಬಾಕಿ ಬರಬೇಕಾಗಿದೆ. ಇನ್‌ಸ್ಪೆಕ್ಟರ್ ಆಫ್ ಕೋ ಆಪರೇಟೀವ್ ಸೊಸೈಟಿಯವರು ವಿಚಾರಣೆ ನಡೆಸಿ, ಈ ಸೊಸೈಟಿಯನ್ನು ಸೂಪರ್ ಸೀಡ್ ಮಾಡಬೇಕೆಂದು ರಿಜಿಸ್ಟ್ರಾರ್‌ಗೆ ಸಲ್ಲಿಸಿದ್ದಾರೆ. ರಿಜಿಸ್ಟ್ರಾರ್‌ರವರು ಆದಷ್ಟು ಜಾಗ್ರತೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತಾರೆ.

ಶ್ರೀ ಕರಿಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಸೂಪರ್ ಸೀಡ್ ಮಾಡುವ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಸೂಪರ್‌ಸೀಡ್ ಆಗುತ್ತೋ ಇಲ್ಲವೋ ಎಂಬುದನ್ನು ಸ್ಪಷ್ಟಪಡಿಸಬೇಕೆಂದು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಸೂಪರ್‌ಸೀಡ್ ಮಾಡಬೇಕೆಂದು ಹೇಳಿ ಕೆಳಮಟ್ಟದ ಅಧಿಕಾರಿಗಳು ರಿಜಿಸ್ಟ್ರಾರ್‌ರವರಿಗೆ ಶಿಫಾರಸ್ಸು ಮಾಡಿದ್ದಾರೆ. ರಿಜಿಸ್ಟ್ರಾರ್‌ರವರು ಆದರ ಬಗ್ಗೆ ಕ್ರಮ ತೆಗೆದು ತೆಗೆದುಕೊಳ್ಳುತ್ತಾರೆ.

ಶ್ರೀ ಕರಿಬಸವನಗೌಡ.—ಆ ಸೊಸೈಟಿಯನ್ನು ಎಷ್ಟು ದಿವಸದಲ್ಲಿ ಸೂಪರ್‌ಸೀಡ್ ಮಾಡುತ್ತೀರಿ ?

ಶ್ರೀ ಹೆಚ್. ಸಿ. ಶ್ರೀಕಂಠಯ್ಯ.—ಅದನ್ನು ನಾನು ನೋಡಿ ಪರಿಶೀಲನೆ ಮಾಡಿಸುತ್ತೇನೆ.

Statistics reg : Lower and Higher Primary Schools in Kunigal Taluk.

188. SRI D. T. MAYANNA (Huliyurdurga).—Will the Minister of State for Primary and Secondary Education be pleased to state:—

(*a*) the number of Lower and Higher Primary Schools in Kunigal Taluk, Tumkur District (Particulars may be furnished);

(*b*) the total number of students in these schools and in (i) lower Primary schools (ii) Higher Primary school (Particulars may be furnished) ;

(*c*) the number of teachers to be required in accordance with the norms and in commensurate with the strength of students (Particulars may be furnished)

(*d*) the number of schools which are without buildings in this taluk;

(*e*) the period within which the Government will provide buildings and teachers to these schools?

SMT. NAGAMMA C. KESHAVA MURTHY.—(Minister of State for Primary and Secondary Education)

(*a*)	Lower Primary Schools	...	251
	Higher Primary Schools	...	72